Tel: "UNIKARNATAK"

Phone: (0836)-2215271

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

आज़ादी का अमृत महोत्सव

# KARNATAK UNIVERSITY, DHARWAD.

*NAAC Accreditted with "A" Grade 2022*

UNIVERSITY WITH POTENTIAL FOR EXCELLENCE"

"ಚುನಾವಣಾ ಪರ್ವ ದೇಶದ ಗರ್ವ"

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಘಟಕ

ಪಾವಟೆ ನಗರ, ಧಾರವಾಡ-580003.

SCH. CASTES & SCH. TRIBES CELL

Pavate Nagar, Dharwad – 580003

ಕವಿ.40(ಪಜಾ:ಪಪಂ)/2024-25/ 145

ದಿನಾಂಕ: 25/06/24

## ಸುತ್ತೋಲೆ

**ವಿಷಯ:** ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 2021-22ನೇ ಹಾಗೂ 2022-23ನೇ ಸಾಲಿನ ಪಿ.ಹೆಚ್.ಡಿ ಸಂಶೋಧನಾ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ SCP/TSP ಯೋಜನೆ ಅನುದಾನದ ಅಡಿಯಲ್ಲಿ ಒಟ್ಟು ಲ್ಯಾಪಟಾಪ್‌ಗಳನ್ನು ನಿರ್ದಿಷ್ಟ ಪಡಿಸಿಕೊಳ್ಳಲು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಆದೇಶ ದಿನಾಂಕ: 22/06/24

******

ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ / ಸ್ನಾತಕೋತ್ತರ ಕೇಂದ್ರಗಳ (ಹಾವೇರಿ, ಗದಗ ಮತ್ತು ಕಾರವಾರ) ಆಡಳಿತಾಧಿಕಾರಿಗಳಿಗೆ / ಸಂಯೋಜಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸನ್ 2021-22ನೇ ಹಾಗೂ 2022-23ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ನಿಯಮಿತ ಹಾಗೂ ಧೃಡೀಕರಣ (Confirmation) ಹೊಂದಿದ ಅರ್ಹ ಸಂಶೋಧನಾ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ SCP/TSP ಯೋಜನೆ ಅನುದಾನದ ಅಡಿಯಲ್ಲಿ ಒಟ್ಟು ಲ್ಯಾಪಟಾಪ್‌ಗಳನ್ನು ನಿರ್ದಿಷ್ಟ ಪಡಿಸಿಕೊಳ್ಳಲು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿಲಾಗಿದೆ.

ಕಾರಣ, ಸದರ ಸಾಲಿನ ಸಂಶೋಧನಾ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣ www.kud.ac.in ದಲ್ಲಿ ಅರ್ಜಿಯನ್ನು ಪಡೆದುಕೊಂಡು ಈ ಕೆಳ ಕಾಣಿಸಿದ ದಾಖಲಾತಿಗಳೊಂದಿಗೆ ದಿನಾಂಕ 05/07/24ರ ಒಳಗಾಗಿ ತಾವು ವ್ಯಾಸಂಗಮಾಡಿದ ವಿಭಾಗಗಳ ಮುಖ್ಯಸ್ಥರುಗಳಿಗೆ ಸಲ್ಲಿಸಲು ತಿಳಿಯಪಡಿಸಿದೆ.

| ಕ್ರ.ಸ | ಸಂಶೋಧನಾ ವಿದ್ಯಾರ್ಥಿಗಳು ತಮ್ಮ ವಿನಂತಿ ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ಪ್ರಮಾಣ ಪತ್ರಗಳು (ಧೃಡೀಕರಣದೊಂದಿಗೆ) |
|---|---|
| 1 | ಜಾತಿ ಪ್ರಮಾಣ ಪತ್ರ |
| 2 | ಚಾಲ್ತಿ ಇರುವ ಪಾಲಕರ ಕುಟುಂಬದ ಆದಾಯ ಪ್ರಮಾಣ ಪತ್ರ |
| 3 | ಪಿ.ಹೆಚ್.ಡಿ ಧೃಡೀಕರಣದ (Confirmation) ನೊಂದಣಿ ಪ್ರಮಾಣ ಪತ್ರ |
| 4 | ವಿದ್ಯಾರ್ಥಿಯ ವಿಭಾಗದ ಗುರುತಿನ ಚೀಟಿ |
| 5 | ವಿದ್ಯಾರ್ಥಿಯ ಆಧಾರ ಕಾರ್ಡ |

**ಈಗಾಗಲೇ ಹಿಂದಿನ ವ್ಯಾಸಂಗದ ಅವಧಿಯಲ್ಲಿ ಲ್ಯಾಪಟಾಪ್ ಪಡೆದುಕೊಂಡ ವಿದ್ಯಾರ್ಥಿಗಳು ಈ ಯೋಜನೆಗೆ ಅರ್ಹರಿರುವುದಿಲ್ಲ.** ವಿಭಾಗದ ಮುಖ್ಯಸ್ಥರುಗಳು ವಿದ್ಯಾರ್ಥಿಗಳಿಂದ ಪಡೆದುಕೊಂಡ ಎಲ್ಲ ಅರ್ಜಿಗಳನ್ನು ವರ್ಷಾವಾರು ಬೇರೆ-ಬೇರೆ ಯಾದಿಯೊಂದಿಗೆ ಉಪಕುಲಸಚಿವರು, ಪಜಾತಿ/ಪಪಂಗಡ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ದಿನಾಂಕ 10/07/24ರ ಒಳಗಾಗಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ.

**ವಿಶೇಷ ಸೂಚನೆ: ಆದಾಯ ಪ್ರಮಾಣ ಪತ್ರವು 5 ವರ್ಷದೊಳಗಿರಬೇಕು ಹಾಗೂ ಸರ್ಕಾರದ ನಿಯಮದ ಪ್ರಕಾರ ಕುಟುಂಬದ ವಾರ್ಷಿಕ ಆದಾಯ 5 ಲಕ್ಷ ಮೀರುವಂತಿಲ್ಲ.**

A. Channappa

ಕುಲಸಚಿವರು

ಪು.ತಿ.ನೋ

ಪ್ರತಿ ಸಾದರಪೂರ್ವಕವಾಗಿ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:

1) ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು ಕವಿವಿ ಆವರಣ/ಕೆಸಿಡಿ ಆವರಣ, ಧಾರವಾಡ
2) ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು/ಸಂಯೋಜಕರುಗಳು ಹಾವೇರಿ, ಗದಗ ಮತ್ತು ಕಾರವಾರ